'ಅಲ್ಲಿಯೂ ಅಷ್ಟೇ... ಆ ಭಾಸ್ಕರರಾಯರ ಬಳಿ ನೀನು ನನ್ನೊಬ್ಬಳನ್ನೇ ಕಳುಹಿಸಬಾರದು. ನೀನೂ ಜೊತೆಯಲ್ಲಿ ಇರಬೇಕು' ಎಂದಳು ಮಂಗಲಾ.

'ನನ್ನ ಗೆಳಯನೊಬ್ಬ ಪಕ್ಕದ ಸಿದ್ದಾಪುರದಲ್ಲಿ ಖಾಸಗಿ ಟ್ರಾವಲ್ಸ್ ಏಜೆನ್ಸಿ ನಡೆಸುತ್ತಿದ್ದಾನೆ. ಅವನ ಆಫೀಸ್‌ಗೆ ರಿಸೆಪ್ಷನಿಸ್ಟ್ ಒಬ್ಬಳು ಬೇಕು ಎಂದಿದ್ದ. ಮಂಗಲಾಳನ್ನು ಕರೆದುಕೊಂಡು ಸಿದ್ದಾಪುರಕ್ಕೆ ಹೋಗಿ ಬರುತ್ತೇನೆ' ಎಂದು ಒಂದು ಸಬೂಬು ಸೃಷ್ಟಿ ಮಾಡಿ ಮಂಗಲಾಳೊಂದಿಗೆ ವಳಗೆರೆಗೆ ಹೊರಟೆ.

ಅದೇ ಬೀದಿ; ಅದೇ ಹೊಲಸು. ಒಂಚೂರೂ ಬದಲಾವಣೆ ಇಲ್ಲ.

ಮೂಗು ಮುಚ್ಚಿಕೊಂಡು ಹೆಜ್ಜೆ ಹಾಕಿದಳು ಮಂಗಲಾ: 'ಈ ಹೊಲಸು ಹಾದಿಯಲ್ಲಿ ಅಮ್ಮ ಅದ್ ಹೇಗೆ ಪದೇಪದೇ ಬಂದು ಹೋಗುತ್ತಿದ್ದಳೋ ಏನೋ' ಎಂದು ಗೊಣಗುತ್ತಾ.

ಅದೇ ಜಗುಲಿ; ಅದೇ ಕುರ್ಚಿಗಳ ಸಾಲು; ಅದೇ ಕಾಲ್ಮಣೆ; ಮರ್ಫಿ ರೇಡಿಯೋ; ಜಿಂಕೆ ಮುಖವಾಡದ ಕೊಂಬುಗಳು ಗೋಡೆಯ ಮೇಲೆ. ಅದೇ ಹಳೆಯ ಚಂದಮಾಮಾ, ಬಾಲಮಿತ್ರ ಕಿರು ಕಾಲ್ಮಣೆಯ ಮೇಲೆ. ಠೊಣಪನೂ ಅವನೇ: ಅಂದು ಚಿಕ್ಕಮ್ಮ ಕೊಟ್ಟ ಪತ್ರವನ್ನು ನನ್ನಿಂದ ತೆಗೆದುಕೊಂಡು ರಾಯರಿಗೆ ಕೊಟ್ಟವನು; ಎರಡು ದಿನಗಳ ನಂತರ ರಾಯರ ಸಂದೇಶವನ್ನು ತಂದು ಚಿಕ್ಕಮ್ಮನಿಗೆ ತಿಳಿಸಿದವನು.

'ಗೌರೀಪುರದಿಂದ ಬಂದಿದ್ದೇವೆ. ರಾಯರನ್ನು ಕಾಣಬೇಕಿತ್ತು' ಎಂದೆ ಠೊಣಪನ ಬಳಿ.

'ನೀನು ಕುಳಿತುಕೋ. ಈ ಹುಡುಗಿ ರಾಯರಿರುವ ಕೋಣೆಗೆ ಹೋಗಿಬರಲಿ' ಎಂದ ಆ ಠೊಣಪ.

ಮಂಗಲಾ ನನ್ನ ಮುಖ ನೋಡಿದಳು.

'ಆಗದು. ನಾನೂ ಇವಳ ಜೊತೆಗೇ ರಾಯರನ್ನು ಕಾಣಲು ಹೋಗುತ್ತೇನೆ ಮತ್ತು ಹಾಗೆ ಹೋಗಬೇಕಾದ ಅಗತ್ಯವೂ ಇದೆ' ಎಂದೆ ತುಸು ಕಟುವಾದ ಧ್ವನಿಯಲ್ಲಿ.

'ಅಗತ್ಯ ಏನೂ ಇದ್ದಿರಬಹುದು... ಅದರಿಂದ ತೊಂದರೆ ಆಗುತ್ತದೆ' ಎಂದ ಆ ಠೊಣಪ.

'ತೊಂದರೆ?... ಯಾರಿಗೆ ತೊಂದರೆ... ನನಗೋ ಅಥವಾ ನಿಮ್ಮ ರಾಯರಿಗೋ?' ಸೆಟೆದು ಕೇಳಿದೆ.

'ರಾಯರಿಗೆ ಏನೂ ತೊಂದರೆ ಆಗದು; ಆಗುವುದೂ ಇಲ್ಲ. ತೊಂದರೆ ಆಗುವುದು ನಿನಗೆ' ಎಂದ ಆ ಠೊಣಪ.

'ಇವಳೊಂದಿಗೆ ನಾನು ಹೋಗದೇ ಇದ್ದರೆ ಇವಳಿಗೆ... ಈ ನನ್ನ ತಂಗಿಗೆ ತೊಂದರೆ ಆಗಬಹುದು... ಬಹುದು ಏನು... ಆಗಿಯೇ ಆಗುತ್ತದೆ' ವಾದಕ್ಕಿಳಿದೆ ನಾನು.

'ಸರಿ... ಒಂದು ನಿಮಿಷ ನಿಲ್ಲು... ರಾಯರನ್ನು ಒಂದು ಮಾತು ಕೇಳಿ ಬರುತ್ತೇನೆ' ಎನ್ನುತ್ತಾ ಆತ ಕೊಠಡಿಯತ್ತ ಹೊರಡಲು ತಿರುಗಿದ. ಅವನನ್ನು ತಡೆದು ನಾನು ಹೇಳಿದೆ: 'ರಾಯರಿಗೆ ಹೇಳಿ... ನೀವು ಗೌರೀಪುರದ ಹಾಸ್ಟೆಲ್‌ನಲ್ಲಿ ಆಶ್ರಯ ಕಲ್ಪಿಸಿಕೊಟ್ಟವನು ಈಗ ವಿದ್ಯಾವಂತನಾದವ, ಒಂದು ನೌಕರಿಯನ್ನೂ ಹಿಡಿದವ ಭೇಟಿಯಾಗಲು ತನ್ನ ಚಿಕ್ಕಮ್ಮ ಚಿಕ್ಕಪ್ಪನ ಮಗಳು ತನ್ನ ತಂಗಿಯೊಂದಿಗೆ ಬಂದಿದ್ದಾನೆ ಅಂತ ದಯವಿಟ್ಟು ರಾಯರಿಗೆ ಹೇಳಿ' ಎಂದೆ.

ಆತ ತಲೆಯಾಡಿಸುತ್ತಾ ರಾಯರಿದ್ದ ಕೊಠಡಿಯ ಒಳಗೆ ಹೋದ.

ಎರಡು ಮೂರು ನಿಮಿಷಗಳ ಬಳಿಕ ಹೊರಬಂದ ಆತ: 'ಸ್ಸರಿ... ಇಬ್ಬರೂ ಹೋಗಿ' ಎಂದ.

ವಳಗೆರೆಯ ಭಾಸ್ಕರರಾಯರ ಕೊಠಡಿಯೊಳಗೆ ಕಾಲಿರಿಸಿದೆವು ನಾನು ಮತ್ತು ಮಂಗಲಾ.